**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

ಸಿಸಿ ನಂಬ್ರ: 96/2025
ಸಿಡಬ್ಲ್ಯೂ- 3
ಪಿಡಬ್ಲ್ಯೂ- 3

| | | |
|---|---|---|
| ಸಾಕ್ಷಿದಾರರ ಹೆಸರು | : | ವಿನಯ್ |
| ತಂದೆಯ ಹೆಸರು | : | ವಿಠಲ ಪೂಜಾರಿ |
| ಪ್ರಾಯ | : | 29 ವರ್ಷ |
| ಉದ್ಯೋಗ | : | ಶಾಮಿಯಾನ |
| ವಾಸ | : | ಚಿತ್ತೂರು |

ದಿನಾಂಕ: **03-12-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ 2 ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ಪಂಚಾನಾಮೆ ಆಗಿದ್ದು, ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು 4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಮತ್ತು 4(ಸಿ) ಎಂದು ಗುರುತಿಸಲಾಯಿತು. ದಿನಾಂಕ 24-11-2024 ರಂದು ಚಿತ್ತೂರಿನ ಚಿತ್ರಕೂಟ ಆಯುರ್ವೇದ ಕ್ಲಿನಿಕ್ ಹತ್ತಿರ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಮಾರಣಕಟ್ಟೆ ದೇವಸ್ಥಾನಕ್ಕೆ ಹೋಗಿ ಬರುವಾಗ ಪೊಲೀಸರು ಅಡ್ಡ ಹಾಕಿ ಸಹಿ ಮಾಡಲು ಹೇಳಿದ್ದು , ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಪ್ಯಾಶನ್ ಪ್ರೋ ಹಾಗೂ ವಾಹನ ಇತ್ತು. ಬೇರೆ ಯಾವುದೇ ವಾಹನ ಇರಲಿಲ್ಲ. ಅದರ ನಂಬ್ರ ಗೊತ್ತಿರುವುದಿಲ್ಲ. ನನ್ನ ಜೊತೆಗೆ ಶರತ್ ಕುಮಾರ್ ಮತ್ತು ಪ್ರದೀಪ ಪೂಜಾರಿ ಇದ್ದರು. ಸದರಿ ವಾಹನಗಳನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಸಾಕ್ಷಿಗೆ ವಾಹನದ ಎರಡು ಚಾಯಚಿತ್ರ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ.ಪಿ.6 ಮತ್ತು 7 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ ಪಿ ಪಿ ಕೆ. ವಕೀಲರಿಂದ:

1.ನಿ.ಪಿ.2 ರಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ತಕ್ಷೀರು ಸ್ಥಳದ ಕರಡು ನಕ್ಷೆ ತಯಾರಿಸಿದ್ದನ್ನು ನೋಡಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ತಕ್ಷೀರು ಸ್ಥಳ ನಾನು ತೋರಿಸಿಕೊಟ್ಟಿರುವುದಿಲ್ಲ.

ಮರು ವಿಚಾರಣೆ: ಇಲ್ಲ

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ **(C/c)**